

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ನೆನೆವ ಮನದ ಗರಿಮೆ!

ಮಗುವಿಗೆ ಹೆಸರನ್ನು ಇಡುವುದು ಮಗು ಹುಟ್ಟಿದ ಮೇಲೆಯೇ ತಾನೆ? ಗಂಡೋ ಹೆಣ್ಣೋ ಎಂದು ಗೊತ್ತಾದ ಮೇಲೆಯೇ ತಾನೆ? ನಾವೆಂದೂ ಲೇಖನವನ್ನು ಬರೆಯಲು ಆರಂಭಿಸುವ ಮೊದಲು ಲೇಖನದ ಶಿರೋನಾಮೆಯನ್ನು ನಿರ್ಧರಿಸಿರುವುದಿಲ್ಲ. ಬೇರೆ ಅಂಕಣಬರಹಗಾರರು ಹೇಗೆ ಮಾಡುತ್ತಾರೋ ಗೊತ್ತಿಲ್ಲ. ಲೇಖನದ ಕೊನೆಯ ಸಾಲನ್ನು ಬರೆದು ಮುಗಿಸುವ ವೇಳೆಗೆ ಅದರ ಶಿರೋನಾಮೆ ತಟ್ಟನೆ ಹೊಳೆಯುತ್ತದೆ. ಆದರೆ ಈ ವಾರದ ಲೇಖನದ ಶಿರೋನಾಮೆ ಪ್ರಾತಃಕಾಲ ಎಚ್ಚರವಾದಾಗ ಕಣ್ತೆರೆಯುವ ಮೊದಲೇ ಮನಃಪಟಲದ ಮುಂದೆ "ನೆನೆವ ಮನದ ಗರಿಮೆ" ಎಂದು ಮೂಡಿತ್ತು. ಎಲ್ಲಿ ಮರೆತುಹೋಗುತ್ತದೆಯೋ ಎಂಬ ಭಯ ಆವರಿಸಿ ತಕ್ಷಣವೇ ಟಿಪ್ಪಣಿ ಮಾಡಿಕೊಳ್ಳಲು ಮರೆಯಲಿಲ್ಲ. ಹಿಂದಿನ ರಾತ್ರಿ ಮಲಗುವ ಮುನ್ನ ಬಗೆಹರಿಸಲು ಸಾಧ್ಯವಾಗದ ಸಮಸ್ಯೆಗೆ ಇರುವ ಪರಿಹಾರ ಪ್ರಾತಃಕಾಲ ಎಚ್ಚರವಾಗುತ್ತಿದ್ದಂತೆಯೇ ತಟ್ಟನೆ ಗೋಚರಿಸಿದ ಅನೇಕ ಉದಾಹರಣೆಗಳು ನಮ್ಮ ಜೀವನದಲ್ಲಿ ಘಟಿಸಿವೆ. "ಮರಹು ಘನ ನಿಮ್ಮ ನೆನೆವ ಮನ ಕಿರಿದೆನ್ನಬಹುದೇ ಬಾರದಯ್ಯಾ" ಎಂಬ ಬಸವಣ್ಣನವರ ವಚನ ಅನೇಕ ವೇಳೆ ನಮ್ಮ ಸ್ವಾನುಭವಕ್ಕೆ ಬಂದಿದೆ. ಅದೆಲ್ಲಾ ಸರಿ, ಆದರೆ ಹಿಂದಿನ ವಾರದ ಅಂಕಣದಲ್ಲಿ ಇನ್ನೊಂದು ಬಗೆಯ ಮರವೆ ಇದೆ ಅದಾವುದೆಂದು ಊಹಿಸಲು ಸಾಧ್ಯವಾದರೆ ಹೇಳಿ ಎಂದು ಕೇಳಿ ಅದನ್ನೇ ಮರೆತಂತೆ ತೋರುತ್ತದೆಯಲ್ಲಾ ಎಂದು ನಿಮಗೆ ಅನ್ನಿಸಬಹುದು. ಆ ಮರವೆ ಯಾವುದೆಂಬುದರ ಸೂಚನೆ ಬಸವಣ್ಣನವರ ಮೇಲ್ಕಂಡ ವಚನದಲ್ಲಿದೆಯೆಂದು ಹೇಳಿದರೆ ನಿಮಗೆ ಒಗಟಾಗಿ ಕಾಣಿಸಬಹುದು. ಲೌಕಿಕ ಬದುಕಿನ ಮರವೆಯ ಸುತ್ತ ಗಿರಕಿ ಹೊಡೆಯುತ್ತ ಈ ಪಾರಲೌಕಿಕ ಮರವೆಯನ್ನು ಓದುಗರನೇಕರು ಊಹಿಸಲು ಸಾಧ್ಯವಾಗಿಲ್ಲ. "ಯಾರಾದರೂ ನಮಗೆ ಇಂಥ ಕೆಲಸ ಮಾಡು ಅಂತ ವಹಿಸಿ ಅದನ್ನು ಬೇಜವಾಬ್ದಾರಿಯಿಂದ ನಾವು ಮರೆತು ಅವರು ಅದರ ಬಗ್ಗೆ ವಿಚಾರಿಸಿದಾಗ 'ಹಾಂ! ಮರೆತು ಹೋಯಿತು' ಎಂದು ಹೇಳುವ 'ಜಾಣ ಮರೆವು' ಇರಬಹುದೇ?" ಎಂದು ರೂಪಾ ಎಂಬ ಓದುಗರೊಬ್ಬರು ಬರೆದಿದ್ದಾರೆ. ರಸ್ತೆ ಅಪಘಾತದಲ್ಲಿ ತಲೆಗೆ ಜೋರಾಗಿ ಪೆಟ್ಟು ಬಿದ್ದು ಆಸ್ಪತ್ರೆಗೆ ದಾಖಲಾದಾಗ ಮೆದುಳಿನ ಸ್ಮೃತಿಕೋಶದ ನರತಂತುಗಳು ನಿಷ್ಕ್ರಿಯಗೊಂಡು ಕಣ್ಣುಬಿಟ್ಟು ನೋಡಿದರೂ ಯಾರನ್ನೂ ಗುರುತಿಸಲಾಗದ ಮರವೆಯ ಸ್ಥಿತಿ ಇರಬಹುದೇ ಎಂದು ಲಾವಣ್ಯ ಶ್ರೀನಿವಾಸ್ ಅವರ ಊಹೆ.

ಈ ಅಂಕಣದಲ್ಲಿ ಪ್ರಸ್ತಾಪಿಸಬೇಕೆಂದಿರುವುದು ಓದುಗರು ಊಹಿಸಲು ಸಾಧ್ಯವಾಗದ ಆಧ್ಯಾತ್ಮಿಕ ಮರವೆಯನ್ನು ಕುರಿತು. ಆ ಮರವೆ ಲೌಕಿಕ ವಿಸ್ಮರಣೆಯಲ್ಲ; ಬದುಕಿನ ಅಸ್ತಿತ್ವದ ಮರವೆ. ತನ್ನೊಳಗಿರುವ ಅಂತಃಸಾಕ್ಷಿಯ ಮರವೆ! ಲೌಕಿಕ ಬದುಕಿನಲ್ಲಿ ಮರವೆ ಒಂದು ವರದಾನ. ಅದಿಲ್ಲದಿದ್ದರೆ ಬದುಕು ಬರೀ ಕಹಿ ನೆನಪುಗಳ ಮೂಟೆಯಾಗುತ್ತಿತ್ತು. ಜೀವನದಲ್ಲಿ ಸಾರವೆಂಬುದೇನಾದರೂ ಉಳಿದಿದ್ದರೆ ಅದು ಮರವೆಯು ನಮಗೆ ನೀಡಿದ ದೇಣಿಗೆ. ಅದು ಲೌಕಿಕ ಬದುಕಿಗೆ ಅವಶ್ಯಕ. ಆದರೆ ಆಧ್ಯಾತ್ಮಿಕ ಮರವೆ ಅಪೇಕ್ಷಣೀಯವಲ್ಲ. ಇಲ್ಲಿ ಮರೆಯುವುದು ಸಲ್ಲದು, ಸದಾ ದೇವರ ಸ್ಮರಣೆಯೇ ಶ್ರೇಷ್ಠ. ಸಾಮಾನ್ಯವಾಗಿ ಮನುಷ್ಯನಿಗೆ ದೇವರ ನೆನಪಾಗುವುದು ಏನಾದರೂ ಕಷ್ಟ ಬಂದಾಗಲೇ. 'ಸಂಕಟ ಬಂದಾಗ ವೆಂಕಟರಮಣ' ಎನ್ನುವ ಗಾದೆಯೇ ಇದೆ. ದಾಸಿಮಯ್ಯನವರ ಈ ಕೆಳಗಿನ ವಚನವನ್ನು ಗಮನಿಸಿ:

**ಎಡರಡಸಿದ ವೇಳೆ ಮೃಡ ನಿಮ್ಮ ನೆನೆವರು**
**ಬಂದೆಡರು ಹರಿಯಲೊಡನೆ**
**ಮೃಡ ನಿಮ್ಮನೆಡೆಹಿಯೂ ಕಾಣರು ರಾಮನಾಥ**

ಎಂದು ದಾಸಿಮಯ್ಯ ವಿಡಂಬನೆ ಮಾಡಿದ್ದಾರೆ. 'ಎಡರು' ಎಂದರೆ ಬದುಕಿನಲ್ಲಿ ಬಂದೆರಗುವ ಎಡರುತೊಡರುಗಳು. ಅವುಗಳು ಬಂದಾಗ ಮಾತ್ರ ದೇವರ ನೆನಪಾಗುತ್ತದೆ. ನಿವಾರಣೆಯಾದಾಗ ದೇವರು ಎದುರಿಗೆ ಬಂದರೂ ಜನ ನೋಡುವುದಿಲ್ಲ. ದೇವರ ನೆನಹು ಬದುಕಿನ ಸೂರ್ಯೋದಯ, ದೇವರ ಮರಹು ಬದುಕಿನ ಸೂರ್ಯಾಸ್ತ. ಬಸವಣ್ಣನವರ ಈ ವಚನವನ್ನು ನೋಡಿ:

**ಎನಗೆ ನಿಮ್ಮ ನೆನಹಾದಾಗಲೇ ಉದಯ**
**ಎನಗೆ ನಿಮ್ಮ ಮರಹಾದಾಗಲೇ ಅಸ್ತಮಾನ**
**ಎನಗೆ ನಿಮ್ಮ ನೆನಹವೇ ಪ್ರಾಣ ಕಾಣಾ ತಂದೆ ಸ್ವಾಮಿ**
**ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ**
**ವದನದಲ್ಲಿ ಷಡಕ್ಷರಿಯ ಬರೆಯಯ್ಯಾ ಕೂಡಲ ಸಂಗಮದೇವಾ**

ಭೂಮಿ ಬೆಳಗಬೇಕೆಂದರೆ ಸೂರ್ಯೋದಯವಾಗಬೇಕು. ಹಾಗೆಯೇ ಮನುಷ್ಯನ ಬದುಕು ಬೆಳಗಬೇಕೆಂದರೆ ದೇವರ ನೆನಹೆಂಬ ಸೂರ್ಯೋದಯವಾಗಬೇಕು. ದೇವರನ್ನು ಮರೆಯುವುದೇ ಅಂಧಕಾರ. ಲೌಕಿಕತೆಯಲ್ಲಿ ಮುಳುಗಿ ಪಾರಲೌಕಿಕತೆಯ ಮರೆವು ಆವರಿಸಿದರೆ ಬದುಕು ಅರ್ಥಹೀನವಾಗುತ್ತದೆ.

**ಉದಯಾಸ್ತಮಾನವೆನ್ನ ಬಸುರಿಂಗೆ ಕುದಿಯಲಲ್ಲದೆ**
**ಶಿವ ನಿಮ್ಮ ನೆನೆಯಲು ತೆರಹಿಲ್ಲವಯ್ಯಾ**
**ಎಂತೋ ಲಿಂಗತಂದೆ, ಎಂತಯ್ಯಾ ಎನ್ನ ಪೂರ್ವ ಲಿಖಿತ**

**ಬೆರಣಿಯನಾಯಲಲ್ಲದೆ ಆಟ್ಟುಣ್ಣ ತೆರಹಿಲ್ಲವೆನಗೆ...!**

ಎನ್ನುತ್ತಾರೆ ಬಸವಣ್ಣನವರು. ಬದುಕು ಬೆರಣಿಯನ್ನು ಆಯ್ದಂತೆ. ಬೆರಣಿ ಬೇಕಾಗಿರುವುದು ಒಲೆ ಹಚ್ಚಲು. ಒಲೆ ಹಚ್ಚುವುದು ಅಡುಗೆ ಮಾಡಲು. ಅಡುಗೆ ಮಾಡುವುದು ಹೊಟ್ಟೆಯ ಹಸಿವನ್ನು ತಣಿಸಲು. ಉಣ್ಣಲು ಇವೆಲ್ಲಾ ಪೂರ್ವಸಿದ್ಧತೆ ಮಾತ್ರ. ಬರೀ ಬೆರಣಿಯನ್ನಾಯುತ್ತಾ ಕುಳಿತರೆ, ಒಲೆ ಹಚ್ಚಿ ಅಡುಗೆ ಮಾಡಿ ಉಣ್ಣುವುದು ಯಾವಾಗ? ಹಾಗೆಯೇ ಲೌಕಿಕ ಬದುಕು ಪಾರಲೌಕಿಕ ಬದುಕಿನ ಪೂರ್ವಸಿದ್ಧತೆ. ಹೀಗಿರುವಾಗ ಲೌಕಿಕ ಬದುಕಿನಲ್ಲಿಯೇ ಮುಳುಗಿದರೆ ಹೇಗೆ? ಲೌಕಿಕ ಬದುಕು ಬೇಡವೆಂದಲ್ಲ, ಅದನ್ನು ಧಿಕ್ಕರಿಸಲೂ ಬರುವುದಿಲ್ಲ. ಆದರೆ ಅದು ಪಾರಲೌಕಿಕ ಬದುಕಿನ ಪೂರ್ವಸಿದ್ಧತೆಯಾಗಬೇಕೇ ಹೊರತು ಪರಮಗುರಿಯಾಗಬಾರದು. ಲೌಕಿಕ ಬದುಕು ಕರ್ತಾರನ ಕಮ್ಮಟ. 'ಇಲ್ಲಿ' ಚೆನ್ನಾಗಿ ಸಲ್ಲುವಂತೆ ಬದುಕಿ 'ಅಲ್ಲಿ' ಸಲ್ಲಲು ಅರ್ಹತೆ ಪಡೆಯಬೇಕು. ಅಂತಹ ಅನುಭಾವಿಗಳಾದ ಬಸವಣ್ಣನವರೂ ಸಹ ಕೆಲವು ವೇಳೆ ಮಾನಸಿಕ ತಾಕಲಾಟಕ್ಕೆ ಒಳಗಾಗಿದ್ದಾರೆ. ದೇವರೇ! ಏಕಾದರೂ ನನ್ನನ್ನು ಹುಟ್ಟಿಸಿದೆ. ನನ್ನನ್ನು ಮನುಷ್ಯನನ್ನಾಗಿ ಹುಟ್ಟಿಸುವ ಬದಲು ಗಿಡಮರವನ್ನಾಗಿ ಹುಟ್ಟಿಸಲು ಬರುತ್ತಿರಲಿಲ್ಲವೇ ಎಂದು ಆಕ್ರಂದಿಸಿದ್ದಾರೆ:

**ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ**
**ಏಕೆ ಹುಟ್ಟಿಸಿದೆ ಪರಲೋಕ ದೂರನ**
**ಎನಗಾಗಿ ಮತ್ತೊಂದು ತರುಮರನಿದ್ದಿಲ್ಲವೇ**
**ಕೂಡಲಸಂಗಮದೇವಾ!**

ಮನುಷ್ಯನಿಗೆ ಲೌಕಿಕ ಜೀವನದಲ್ಲಿ ಬರುವ ಮಾನಸಿಕ ತಾಕಲಾಟಗಳು ಇಲ್ಲಿ ಹರಳುಗಟ್ಟಿವೆ.

ಶ್ರೀಮದ್‌ಭಾಗವತಪುರಾಣದಲ್ಲಿ ಒಂದು ರೋಚಕ ಪ್ರಸಂಗ ಬರುತ್ತದೆ. ಕಾನ್ಯಕುಬ್ಜದಲ್ಲಿ ಅಜಮಿಳ ಎಂಬ ಒಬ್ಬ ವೇದಶಾಸ್ತ್ರಪಾರಂಗತನಿದ್ದ. ಆತ ಮನಸ್ಸಿನ ದೌರ್ಬಲ್ಯದಿಂದಾಗಿ ದುರ್ವ್ಯಸನ ದುರಾಚಾರಗಳ ದಾಸನಾದ. ತನ್ನ ಧರ್ಮಪತ್ನಿಯನ್ನು ತ್ಯಜಿಸಿ ಒಬ್ಬ ವೇಶ್ಯೆಯ ಸಂಗವನ್ನು ಮಾಡಿದ. ಜೀವನವಿಡೀ ಅನೀತಿ ಅನಾಚಾರಗಳಲ್ಲಿ ತೊಡಗಿ ಕೆಟ್ಟವ್ಯಕ್ತಿಯೆನಿಸಿದ ಅವನಿಗೆ ಸಾವು ಸಮೀಪಿಸಿತು. ಸಾಯುವಾಗ ಅವನು ತನ್ನ ಮಗನನ್ನು ಕೂಗಿ ಹತ್ತಿರ ಕರೆದ. ಅವನ ಮಗನ ಹೆಸರು 'ನಾರಾಯಣ'. ಸಾಯುವಾಗ 'ನಾರಾಯಣ, ನಾರಾಯಣ' ಎಂದು ಕರೆದಿದ್ದರಿಂದ ಶ್ರೀಮನ್ನಾರಾಯಣನ ನಾಮಸ್ಮರಣೆ ಮಾಡಿದಂತಾಗಿ ಅವನಿಗೆ ಮೋಕ್ಷ ದೊರೆಯಿತು ಎನ್ನುತ್ತಾರೆ. ಎಂತಹ ಕೆಟ್ಟವ್ಯಕ್ತಿಯಾದರೂ ಸಾಯುವಾಗ ದೇವರ ನಾಮಸ್ಮರಣೆ ಮಾಡಿದರೆ ಮೋಕ್ಷ ಸಿಗುತ್ತದೆ ಎಂಬ ನಂಬಿಕೆ ಇದೆ. ಮಕ್ಕಳಿಗೆ ದೇವರ ಹೆಸರನ್ನು ಇಡುವುದು ಈ ಕಾರಣಕ್ಕಾಗಿ. ಮಕ್ಕಳ ಹೆಸರನ್ನು ಕರೆಯುವ ನೆಪದಲ್ಲಾದರೂ ದೇವರ ನಾಮಸ್ಮರಣೆಯಾಗಲೀ ಎಂಬ ಸದಾಶಯ. ಹಾಗಾದರೆ ಮಕ್ಕಳನ್ನು ಬಯ್ಯುವಾಗ ದೇವರನ್ನು ಬಯ್ದಂತೆ ಆಗುವುದಿಲ್ಲವೇ? ದೇವರ ಪ್ರಾರ್ಥನೆಯಲ್ಲಿ 'ನಿಂದಾಸ್ತುತಿ' ಎಂಬ ವಿಧಾನವೂ ಇದೆ. ತಂದೆತಾಯಂದಿರಿಗೆ ಮಕ್ಕಳನ್ನು ಬಯ್ಯುವುದರ ಹಿಂದೆ ಮಕ್ಕಳ ಭವಿತವ್ಯದ ಬಗ್ಗೆ ಹೇಗೆ ಕಾಳಜಿ ಇರುತ್ತದೆಯೋ ಹಾಗೆ.

ಜೀವನವಿಡೀ ಲೌಕಿಕಜೀವನದಲ್ಲಿ ಮುಳುಗಿದವನಿಗೆ ಸಾಯುವಾಗ ದೇವರ ನೆನಪಿಗಿಂತ ತಾನು ಕೂಡಿಟ್ಟ ಹಣ, ಆಸ್ತಿ ಹೆಚ್ಚು ನೆನಪಾಗುತ್ತದೆ. ತನ್ನ ಸಂಪಾದನೆ ಅನ್ಯರ ಪಾಲಾಗುತ್ತದೆಯಲ್ಲಾ ಎಂಬ ಚಿಂತೆ ಅವನನ್ನು ಆವರಿಸುತ್ತದೆ. ಸಾಯುವವನ ಸುತ್ತ ನೆರೆದ ಸಂಬಂಧಿಗಳಿಗೂ, ವಾರಸುದಾರರಿಗೂ ಸಹ ಅವನ ಸಾವಿನ ಚಿಂತೆಗಿಂತ ಅವನು ಯಾವಾವ ಬ್ಯಾಂಕಿನಲ್ಲಿ ಎಷ್ಟೆಷ್ಟು ಹಣ ಕೂಡಿಟ್ಟಿದ್ದಾನೆ, ಹೇಳದೇ ಸತ್ತರೆ ಹೇಗೆ ಎಂಬ ಚಿಂತೆಯೇ ಹೆಚ್ಚು. ಮರದಿಂದ ಆಯತಪ್ಪಿ ಬೀಳುವವನು ನಾರಾಯಣನನ್ನು ನೆನೆಯುವನೆ? 'ಅಯ್ಯಯ್ಯಪ್ಪೋ ಸತ್ತೆ, ಸತ್ತೆ!' ಎನ್ನುತ್ತಾ ಬಿದ್ದು ಸಾಯುತ್ತಾನೆ. ದೇವರ ಸ್ಮರಣೆಗೂ ಒಂದು ಸಂಸ್ಕಾರ ಬೇಕು.

ಯಾರಾದರೂ ನೋಡುತ್ತಿದ್ದಾರೆಂದರೆ ಮನುಷ್ಯ ಕೆಟ್ಟ ಕೆಲಸ ಮಾಡಲು ಹಿಂಜರಿಯುತ್ತಾನೆ. ನಿಜವಾದ ವ್ಯಕ್ತಿತ್ವ ಏನೆಂದು ತಿಳಿಯುವುದು ಅವನು ಏಕಾಂಗಿಯಾಗಿ ಇದ್ದಾಗ ಮಾತ್ರ. ಹಾಗೆ ನೋಡಿದರೆ ಆಧ್ಯಾತ್ಮಿಕದೃಷ್ಟಿಯಿಂದ ಯಾರೂ ಏಕಾಂಗಿಯಲ್ಲ. 'ಆತ್ಮಸಂಗಾತಕ್ಕೆ ನೀನೆನಗುಂಟು' ಎನ್ನುತ್ತಾಳೆ ಅಕ್ಕಮಹಾದೇವಿ. ಅಂತಹ ಆತ್ಮಸಾಕ್ಷಿಯ ಅರಿವು ನಮ್ಮ ದೈನಂದಿನ ಬದುಕಿನಲ್ಲಿ ಇದ್ದರೆ ಯಾವ ತಪ್ಪನ್ನೂ ಮಾಡಲು ಸಾಧ್ಯವಿಲ್ಲ. ಶರಣರ ಮಾತಿನಲ್ಲಿ ಅರಿವು ಮತ್ತು ಮರವೆಗಳ ಮಧ್ಯೆ ಇರುವ ಗೆರೆಯೇ ಮನುಷ್ಯನ ಔನ್ನತ್ಯಕ್ಕೆ ಕಾರಣ:

**"ಅರಿತರೆ ಶರಣ, ಮರೆತರೆ ಮಾನವ!"**

30.6.2011

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑